

# ‘ಆಗಮಾಪಾಯಿನಃ’

ಶಶಿಕಲಾ ಶ್ರೀಧರ್

*ಅನಿತ್ಯ ಸಂಸಾರ, ಅನಿತ್ಯ ಜೀವನ – ಇದು ವೈರಾಗ್ಯವನ್ನು ಮೂಡಿಸುವ ಒಂದು ವಿಚಾರಧಾರೆ. ಈ ಕುರಿತು ವಿವರಿಸಿರುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು.*

ಇದು ಪ್ರಪಂಚ ! ಇಲ್ಲಿ ಸದಾ ಸಂಯೋಗ ವಿಯೋಗ ನಡೆಯುತ್ತಿರುತ್ತದೆ. ಇಷ್ಟ-ಅನಿಷ್ಟಗಳು ಇದ್ದೇ ಇರುತ್ತವೆ. ಇಂದಿದ್ದವನು ನಾಳೆ ಇಲ್ಲ, ನಾಳೆಯವನು ನಾಡಿದ್ದಿಲ್ಲ, ನಾಳೆ ನಾಳೆ ಎನ್ನುವುದೆಲ್ಲ ನೂರ್ಕೋಟಿ ನಿನ್ನೆಗಳ ಜೊತೆಗೆ ಸೇರಿಹೋಗುತ್ತವೆ. ಇದರಂತೆಯೇ ಕಷ್ಟ-ಸುಖಗಳು. ಎಲ್ಲಾ ಬಂದು ಹೋಗುವ ‘ಆಗಮಾಪಾಯಿ’ಗಳು. ಸುಖ-ದುಃಖವೆಂಬ ಚಕ್ರ ಸುತ್ತುತ್ತಲೇ ಇರುತ್ತದೆ. ಯಾವಾಗಲೂ ಸುಖ ಅಥವಾ ಯಾವಾಗಲೂ ಕಷ್ಟ ಎಂಬುದಿಲ್ಲ. ಒಮ್ಮೆ ಚಕ್ರದ ಮೇಲ್ಭಾಗಕ್ಕೆ ಸುಖ ಬಂದಾಗ ದುಃಖ ಅಡಿಯಲ್ಲಿರುತ್ತದೆ. ದುಃಖ ಮೇಲ್ಭಾಗಕ್ಕೆ ಬಂದಾಗ ಸುಖ ಕೆಳಭಾಗದಲ್ಲಿರುತ್ತದೆ. ಎರಡೂ ಬಂದು ಹೋಗಿ ಮಾಡುತ್ತಿರುತ್ತದೆ. ಎರಡೂ ಶಾಶ್ವತವಾಗಿ ನಿಲ್ಲುವುದಿಲ್ಲ. ಆದ್ದರಿಂದ ನಾವು ಹೇಗಿರಬೇಕು ಎಂದು ಗುರುಹಿರಿಯರು ಹೇಳುತ್ತಾರೆ ? **‘ಸುಖ ಬಂದರೆ ಹಿಗ್ಗದೆ ನೋವಿನಲ್ಲಿ ಕುಗ್ಗದೆ’** ಇರಬೇಕು ಎನ್ನುತ್ತಾರೆ. ಶ್ರೀಕೃಷ್ಣ ಪರಮಾತ್ಮ ಗೀತೆಯಲ್ಲಿ ಸುಖ-ದುಃಖ, ಲಾಭ-ನಷ್ಟ, ಜಯ-ಅಪಜಯ ಎಲ್ಲವನ್ನೂ ಸಮಾನವಾಗಿ ಭಾವಿಸಿಕೊಂಡು ಹೋಗ ಬೇಕು ಎನ್ನುತ್ತಾನೆ. ನಾವು ಸ್ಥಿತಪ್ರಜ್ಞರಾಗಿರಬೇಕಂತೆ. ಶ್ರೀರಾಮನಿಗೆ ಯುವರಾಜ ಪಟ್ಟಾಭಿಷೇಕ ಎಂದು ಹಿಂದಿನ ದಿನ ಘೋಷಿಸಿದಾಗ ಅವನ ಮುಖ ಸಂತೋಷದಿಂದ ಅರಳಲಿಲ್ಲವಂತೆ. ಮರುದಿನ ವನವಾಸಕ್ಕೆ ಹೊರಡು ಎಂದಾಗ ಅವನು ಮ್ಲಾನವದನನಾಗಲಿಲ್ಲವಂತೆ. ನಾವೂ ಅವನಂತೆಯೇ ಇರಬೇಕಂತೆ. ಮಹಾತ್ಮ ರೊಬ್ಬರು ಇದಕ್ಕೆ ಸಮಾಧಾನ ಹೇಳುತ್ತಾ, ‘‘ಸಮಸ್ಯೆಗಳು ಹೆಚ್ಚು ಕಾಲ ಉಳಿಯುವುದಿಲ್ಲ, ಅವು ನಮ್ಮ ಜೀವನದ ಅನುಭವವೆಂಬ ಪುಸ್ತಕದಲ್ಲಿ ಸಹಿಹಾಕಿ ಮುಂದಕ್ಕೆ ಹೋಗಿಬಿಡುತ್ತವೆ’’ ಎನ್ನುತ್ತಾರೆ. **‘‘ನೀನಿಟ್ಟಹಂಗೇ ಇರುವೆನೋ ಹರಿಯೇ, ನನ್ನ ದೊರೆಯೇ’’** ಎನ್ನುತ್ತಾ ಅವನು ಕೊಡುವುದನ್ನೆಲ್ಲಾ ಸ್ವೀಕರಿಸುತ್ತಾ ಹೋಗೋಣ. ಅವನಾಡಿಸುವಂತೆಯೇ ಆಡೋಣ, ಅವನು ನುಡಿಸುವಂತೆಯೇ ನುಡಿಯೋಣ. ಬೇರೆ ದಾರಿಯೇ ಇಲ್ಲ!

ನಾವೇ ಶಾಶ್ವತವಿಲ್ಲ ಎನ್ನುವಾಗ ಸುಖ-ದುಃಖಗಳು ಶಾಶ್ವತವೆ? **‘ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯಿರಲಿ.’** ಕಷ್ಟ ದುಃಖ ಕಾರ್ಪಣ್ಯ ಇವುಗಳನ್ನು ಸಹಿಸುವ, ಎದುರಿಸುವ ಶಕ್ತಿಯನ್ನು ಅವನೇ ಕೊಡಲಿ. ಸೂತ್ರಧಾರ ಪರಮಾತ್ಮ ಈ ಸೂತ್ರದ ಗೊಂಬೆಗಳನ್ನು ಅವನಿಚ್ಛೆ ಬಂದಂತೆ ಆಡಿಸಲಿ. ‘ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ’ ಎಂಬಂತೆ ಆ ಮಹಾಮಾರ್ಜಾಲ ಮಾನವ ಮೂಷಕಗಳನ್ನು ಮನಬಂದಂತೆ ಆಡಿಸಿ ಸಂತೋಷಪಡಲಿ!

ಭಗವಂತನೂ ನಮ್ಮ ಪ್ರಾಚೀನ ಕರ್ಮಗಳ ಪಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡೇ ಅದಕ್ಕನುಗುಣವಾಗಿ ಸುಖ-ದುಃಖ, ಜಯ-ಅಪಜಯ, ಲಾಭ-ನಷ್ಟ, ಆರೋಗ್ಯ-ಅನಾರೋಗ್ಯ ಇವುಗಳನ್ನು ತಕ್ಕಡಿಯಲ್ಲಿ ಸರಿಯಾಗಿ ತೂಕಮಾಡಿ ಕೊಡುತ್ತಾನಂತೆ. ಆದ್ದರಿಂದ ನಾವು ಕಟ್ಟಿ ತಂದ ಬುತ್ತಿಯನ್ನು ನಾವೇ ತಿನ್ನಬೇಕು : **‘ಹಾಂಗೇ ಇರಬೇಕು ಸಂಸಾರದಲ್ಲಿ, ಪ್ರಾಚೀನದಲ್ಲಿ ಹ್ಯಾಂಗೆ ಬರೆದಿತ್ತೋ ಹಾಂಗೇ ಇರಬೇಕು’** ಎಂದು ಭಾವಿಸೋಣ.

ಪರಮಾತ್ಮನೇ ಈ ಭೂಮಿಯಲ್ಲಿ ಅವತರಿಸಿ ಬಂದಾಗ ಅವನಿಗೂ ಕಷ್ಟ ತಪ್ಪಿದ್ದಲ್ಲ. ಸೀತಾರಾಮರಿಗೆ ಬಂದ ಕಷ್ಟ ಕಡಿಮೆಯೆ? ಕೃಷ್ಣ ಬಲರಾಮರು ಸುಖವಾಗಿದ್ದರೆ? ಇನ್ನು ಪಂಚಪಾಂಡವರು

ಕೃಷ್ಣನೇ ಜೊತೆಯಲ್ಲಿ ಇದ್ದರೂ ಧರ್ಮಮಾರ್ಗದಲ್ಲಿ ನಡೆಯಲು ಎಷ್ಟೊಂದು ಕಷ್ಟಪಡಬೇಕಾಯಿತು? ಇನ್ನು ಆ ಪರಮಾತ್ಮನ ಪರಮ ಭಕ್ತರಾದ ಪುರಾಣಕಾಲದ ಧ್ರುವ, ಪ್ರಹ್ಲಾದ, ಗಜೇಂದ್ರ, ಕಲಿಗಾಲದ ಮೀರಾ, ಅಕ್ಕಮಹಾದೇವಿ, ಜ್ಞಾನದೇವ, ತುಕಾರಾಮ ಮುಂತಾದ ಅತಿಶ್ರೇಷ್ಠ ಭಕ್ತರನ್ನೆಲ್ಲ ಕಷ್ಟ ಆಪತ್ತುಗಳ ಸಾಗರದಲ್ಲಿ ಅದ್ದಿ ತೆಗೆದು ಹಾಕಲಿಲ್ಲವೆ? ಒಳ್ಳೆಯವರಿಗೇ ಕಷ್ಟ ತಪ್ಪಿದ್ದಲ್ಲ. ಅವರಿಗೆ ಇದು ಪರೀಕ್ಷೆಯೋ ಅಥವಾ ಶಿಕ್ಷೆಯೋ? ಅಥವಾ ಇದೇ ಯುಗ-ಧರ್ಮವೊ ?

ಈಗ ನಮ್ಮ ಕಳೆದುಹೋದ ದಿನಗಳ ಬಗ್ಗೆ ಒಮ್ಮೆ ಯೋಚಿಸೋಣ :

ಮುಗ್ಧ ಬಾಲ್ಯ ಆಟಪಾಟಗಳಲ್ಲಿ ಕಳೆಯಿತು. ಯೌವನದಲ್ಲಿ ಸತಿ-ಸುತರ ಲಾಲನೆ ಪೋಷಣೆಗಾಗಿ ಧನ-ದ್ರವ್ಯ ಸಂಪಾದನೆ ಮಾಡುತ್ತಾ ಕಷ್ಟಪಡುವುದಷ್ಟೇ ಹೊರತು ಇವರೆಲ್ಲರನ್ನೂ ತೃಪ್ತಿ ಪಡಿಸಲು ಸಾಧ್ಯವೇ ಇಲ್ಲವಾಯಿತು. ಎಷ್ಟು ದುಡಿದರೂ ಸಾಲದು. ಎಲ್ಲೆಲ್ಲೂ ಅತೃಪ್ತಿ ನಿರಾಶೆ. ಈ ತೃಪ್ತಿ ಎಂಬುದು ಹೊರಗಿನಿಂದ ಸಿಗುವ ವಸ್ತುವಲ್ಲ ಒಳಗಿನಿಂದ ಬರಬೇಕಾದುದು ಎಂಬ ಅರಿವಿರಲಿಲ್ಲ. **'ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ, ಕಷ್ಟ ಬೇಡೆಂಬಾಸೆ, ಕಡು ಸುಖವ ಕಾಂಬಾಸೆ'** ; ಒಟ್ಟಿನಲ್ಲಿ ನಷ್ಟಜೀವನದ ಆಸೆ!

ಹೀಗೆ ಮನೆಮಂದಿಯನ್ನು ಮೆಚ್ಚಿಸಲು ಹೋಗಿ ಜೀವನದ ಗುರಿಯತ್ತ ಗಮನವೇ ಹರಿಯುವುದಿಲ್ಲ. ಅತ್ತ ಇತ್ತ ಸುತ್ತ ಮುತ್ತ ಅಲೆದಾಡುವುದು ಮನಸ್ಸಿನ ಸ್ವಭಾವ. ದೇವನಿಂದ ದೂರಬಂದ ಜೀವ ಭವದ ಬಂಧನದಲ್ಲಿ ಸಿಲುಕಿ ಪಡಬಾರದ ಕಷ್ಟಕೋಟಲೆಗಳನ್ನು ನಷ್ಟ ನೋವುಗಳನ್ನು ಅನುಭವಿಸುತ್ತಾನೆ. ತನ್ನವರಲ್ಲದವರನ್ನು ತನ್ನವರೆಂಬ ಭ್ರಮೆಯಲ್ಲಿ ಅವರನ್ನೇ ನಂಬುತ್ತಾ ನೆಚ್ಚುತ್ತಾ ಸಾಗುತ್ತಾನೆ. ಇವರಾರೂ ನನ್ನವರಲ್ಲ, ಬೇರೊಬ್ಬನಿದ್ದಾನೆ; ಅವನೊಬ್ಬನೇ ನನ್ನವ ಎಂಬ ಅರಿವು ಮೂಡುವ ವೇಳೆಗೆ ಬಾಳು ಸವೆದು ಹೋಗಿರುತ್ತದೆ. ಮುಪ್ಪು ಆವರಿಸಿ ನಮ್ಮನ್ನು ಬೆಪ್ಪು ಮಾಡಿದಾಗ ಬಾಳು ಹೆಪ್ಪುಗಟ್ಟಿ ಹುಳಿಹುಪ್ಪಟೆಯಾಗಿಬಿಟ್ಟಿರುತ್ತದೆ. ಚಿಂತನ, ಮಂಥನ ಯಾವುದೂ ನಮ್ಮಿಂದ ಸಾಧ್ಯವಾಗುವುದಿಲ್ಲ. ದೇಹ, ಮನಸ್ಸು ದುರ್ಬಲವಾಗಿ, ಸ್ಮರಣಶಕ್ತಿ ಕುಂಠಿತವಾಗಿಬಿಟ್ಟಿರುತ್ತದೆ. ಹುಟ್ಟಿದವನಿಗೆ ಸಾವು ನಿಶ್ಚಯ ಎಂಬುದು ತಿಳಿದಿದ್ದರೂ ಮರಣವನ್ನು ಎದುರಿಸುವ ಸಿದ್ಧತೆಯೇ ಆಗಿರುವುದಿಲ್ಲ. ಏಕೆ? ಏಕೆಂದರೆ ಚಿತೆ ಏರುವವರೆಗೂ ಚಿಂತೆ ಕಾಡುತ್ತಲೇ ಇರುತ್ತದೆ. ಕಟ್ಟಕಡೆಗೆ ಒಂದು ಬೃಹತ್ ಪ್ರಶ್ನೆ ಕಣ್ಣ ಮುಂದೆ ಬಂದು ನಿಲ್ಲುತ್ತದೆ : ''ನಾನು ಏನನ್ನು ಸಾಧಿಸಿದೆ ? ಯಾವ ಪುರುಷಾರ್ಥಕ್ಕಾಗಿ ಬಾಳಿದೆ ?''

ಹಾಗಾದರೆ ಮುಂದೆ ನಮ್ಮ ಗತಿಯೇನು ? ದಾರಿ ಯಾವುದಯ್ಯಾ ವೈಕುಂಠಕೆ ?

ಈ ಜಗತ್ತಿನಲ್ಲಿ ಎಲ್ಲವೂ ಯಾವುದೋ ಒಂದು ದೊಡ್ಡ ಶಕ್ತಿಯ ಇಚ್ಛೆಯಂತೆ ನಡೆಯುತ್ತಿದೆ. ಅದರ ಮುಂದೆ ನಮ್ಮ ಆಟ ಏನೂ ನಡೆಯದು. ಆ ದಿವ್ಯಶಕ್ತಿ ಹುಟ್ಟುಕುರುಡನನ್ನು ನೋಡುವಂತೆ ಮಾಡಬಲ್ಲದು, ಎರಡೂ ಕಾಲುಗಳಿಲ್ಲದ ಹೆಳವನನ್ನು ದೊಡ್ಡ ಬೆಟ್ಟವನ್ನು ಹತ್ತಿಸಬಲ್ಲದು, ಹಲವರಿಗೆ ಬ್ರಹ್ಮಪದವಿತ್ತು ಹಲವರನ್ನು ಭವಜಲಧಿಯ ಸುಳಿಯೊಳಕ್ಕೆ ನೂಕಲೂಬಲ್ಲದು. ಅದು ಚಾಲಕಶಕ್ತಿ; ನಾವು ಕೇವಲ ಯಂತ್ರ. ಅದು ರಥಿಕ; ನಾವು ಕೇವಲ ರಥ. ಈ ರಥಿಕ ನಡೆಸಿದಂತೆಯೇ ನಾವು ನಡೆಯಬೇಕು. ಏಕೆಂದರೆ ಜಗತ್ತು ಅವನ ಅಧೀನ, ನಾವೆಲ್ಲ ಅವನ ಸೇವಕರು ಮಾತ್ರ.

ಹಾಗಾದರೆ ಈಗ ನಮ್ಮ ತಕ್ಷಣದ ಕರ್ತವ್ಯವೇನು ?

ಭಕ್ತ ರಾಮಪ್ರಸಾದನು ಹೇಳುವಂತೆ, ಪಾಳುಬಿದ್ದಿರುವ ಈ ನಮ್ಮ ಬಾಳೆಂಬ ಹೊಲವನ್ನು ಹೊಲದ ಒಡೆಯನು ಎಳೆದೊಯ್ಯುವ ಮುನ್ನ ಎಚ್ಚೆತ್ತು, ಅವನ ನೆನಹಿನೊಡನೆ ಹಸನಗೈದು, ಗುರುವಿನಿಂದ ಪಡೆಯುವ ಮಂತ್ರದ ಬೀಜಾಕ್ಷರವನ್ನು ಬಿತ್ತಿ, ಭಗವಂತನ ಪ್ರೇಮವೆಂಬ ಜಲವನ್ನು ಎರೆದು, ಮೃತ್ಯುವೂ ನಮ್ಮ ಬಳಿ ಬಾರದಂತೆ ಭಗವನ್ನಾಮದ ಬೇಲಿಯನ್ನು ಕಟ್ಟಿ, ಸಾಧನೆಯೆಂಬ ಕೃಷಿಗೈದು, ಹೊನ್ನಿನ ಬೆಳೆಯನ್ನು ಬೆಳೆಯುತ್ತಾ ಹೋಗಬೇಕಂತೆ !

ಒಂದು ಸತ್ಯವನ್ನು ನಾವು ತಿಳಿದುಕೊಳ್ಳಲೇಬೇಕು. ನಮ್ಮ ಸುತ್ತಮುತ್ತ ಸತಿ-ಪತಿ, ಮಾತೆ-ಪಿತ, ಸುತ ಮುಂತಾದ ಬಂಧುಗಳೆಲ್ಲರೂ ಇರುತ್ತಾರೆ. ಆದರೆ ಎಲ್ಲಿಯವರೆಗೆ ? ನಮ್ಮ ಅಂತಿಮ ಪಯಣದವರೆಗೆ ಮಾತ್ರ. **'ಗತಿಯು ತಪ್ಪಿ ಹೋಗುವಾಗ ಸತಿಯು ಸುತರು ಬರುವರೆ?'** 'ಆರೂ ಸಂಗಡ ಬಾಹೋರಿಲ್ಲ.' ನಾವು ಆಗ ಏಕಾಂಗಿ ಪಯಣಿಗ ಅಷ್ಟೇ ಎಂಬುದು ಕಠೋರ ಸತ್ಯ.

ಹಾಗಾದರೆ ನಾವು ಹೇಗೆ ಬಾಳಬೇಕು ?

**'ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ'** ಎಂಬುದನ್ನು ಸ್ಮರಿಸುತ್ತಾ ನಮ್ಮ ನಿಜಧಾಮದೆಡೆಗೆ ನಡೆಯುವ ನಿತ್ಯಪಯಣ ನಮ್ಮದಾಗಬೇಕು. **'ನಡೆ ನೀ ಮನವೇ ನಿಜದಾಲಯಕೆ'** ಎನ್ನಬೇಕಂತೆ. ಸಂಸಾರವೆಂಬ ಈ ವಿದೇಶದಲ್ಲಿ, ಭ್ರಾಂತಿಯ ಬಯಲಲ್ಲಿ ಅಲೆದುದಾಯಿತು. ಇಲ್ಲಿ ನಮ್ಮವರಾರೂ ಇಲ್ಲ. ನಾವು ಎಲ್ಲಿಂದ ಬಂದೆವೋ ಆ ಸ್ವದೇಶಕ್ಕೇ ಹೋಗಬೇಕು. ಅಲ್ಲಿರುವ ನಮ್ಮ ನಿಜಬಂಧುವನ್ನು ಸೇರಬೇಕು. ಆದರೆ ಅಲ್ಲಿ ತಲುಪುವ ಬಗೆ ಹೇಗೆ ?

ಮೊದಲು ನಮ್ಮ ಪುಣ್ಯಧನವನ್ನು ಲೋಭ ಮೋಹಗಳೆಂಬ ಚೋರರಿಗೆ ಸಿಗದಂತೆ ಭದ್ರವಾಗಿಟ್ಟುಕೊಂಡು ಸತ್ಯಪಥದಲ್ಲಿ ನಡೆಯಬೇಕು. ಸಾಗುತ್ತಿರುವ ಹಾದಿ ಸರಿಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಲ್ಲಲ್ಲಿ ಸಿಗುವ ಸತ್ಸಂಗವೆಂಬ

ವಿಶ್ರಾಂತಿ ಭವನದಲ್ಲಿ ತಂಗಿ, ವಿರಮಿಸಿ, ಮುಂದಿನ ಪಥದ ವಿವರಗಳನ್ನು ಅಲ್ಲಿನ ಸಜ್ಜನರಿಂದ ತಿಳಿದು ಪಯಣವನ್ನು ಮುಂದುವರಿಸಬೇಕಂತೆ. 'ಗುರಿಸೇರುವವರೆಗೂ ನಿಲ್ಲಬೇಡಿ' ಎಂಬ ವಿವೇಕ ವಾಣಿಯನ್ನು ಸ್ಮರಿಸುತ್ತಾ, ಅದರಿಂದ ಸ್ಫೂರ್ತಿಪಡೆದು ಸಾಗಬೇಕಂತೆ. ದಾರಿಯಲ್ಲಿ ಬೇರೆ ಏನಾದರೂ ಆಪತ್ತು ಬಂದರೆ ಮೃತ್ಯುವನ್ನೇ ಬೆದರಿಸುವ ತೇಜದಿಂದ ಕೂಡಿರುವ ಆ ದೇವ ದೇವನನ್ನೇ ಮೊರೆ ಹೋಗಬೇಕಂತೆ.

ಇವೆಲ್ಲಾ ಸಾಧಾರಣ ಮನುಷ್ಯರಾದ ನಮ್ಮಂಥವರಿಂದ ಸಾಧ್ಯವೆ? —ಅಸಾಧ್ಯವಾದುದನ್ನು ಸಾಧ್ಯವಾಗಿಸಲು ನಮ್ಮಿಂದ ಸಾಧ್ಯವೇ ಎಂದು ಒಮ್ಮೆ ಪ್ರಯತ್ನಿಸಿ ನೋಡಬಹುದಲ್ಲವೆ ?

ನಾವು ಬೇಡವೆಂದರೂ ಕಾಲವೇ ನಮ್ಮನ್ನು ತಳ್ಳಿಕೊಂಡು ಹೋಗುತ್ತದೆ. ಜೀವನವೆಂದರೆ, ಮುಂದುಮುಂದಕ್ಕೆ ಹೋಗುವುದು, ಬದಲಾವಣೆಗಳನ್ನು ಸ್ವೀಕರಿಸುತ್ತಾ ಸಾಗುವುದು, ಮುಂದೆ ಯಾವುದು ನಮ್ಮನ್ನು ಶಕ್ತಿಯುತರನ್ನಾಗಿ ಮಾಡುವುದೋ, ಪೂರ್ಣವ್ಯಕ್ತಿಯನ್ನಾಗಿ ಪರಿವರ್ತಿಸಬಲ್ಲುದೋ ಅದನ್ನರಸುತ್ತಾ ನಡೆಯುವುದಲ್ಲವೆ?

ಬಾಳಿನಲ್ಲಿ ಬರುವ ನೋವು 'ನೀನು ಬದುಕಿದ್ದೀಯೆ' ಎಂದು ಹೇಳುತ್ತದೆಯಂತೆ.

ಬರುವ ಸಮಸ್ಯೆಗಳು 'ನೀನು ಶಕ್ತಿವಂತ' ಎಂದು ಹೇಳುತ್ತವೆಯಂತೆ.

ಮಾಡುವ ಪ್ರಾರ್ಥನೆಗೆ ಭಗವಂತ 'ನೀನು ಒಬ್ಬಂಟಿಗನಲ್ಲ, ನಿನ್ನೊಡನೆ ನಾನಿರುವೆ' ಎನ್ನುತ್ತಾನಂತೆ.

ಇಂತಹ ಒಂದು ಭರವಸೆಯಿಂದ ಮುಂದುವರಿಯೋಣ.

ಪ್ರಕೃತಿ ಮಾನವರಿಗೆ ತಿಳಿಸಿದ ಅತಿ ಸುಂದರ ಸಂದೇಶ : ನೀವು ಮಾಲಿಕರಲ್ಲ, ಈ ಜಗತ್ತಿಗೆ ಬಂದ ಅತಿಥಿಗಳು ಮಾತ್ರ ಎಂಬುದನ್ನು ಮೊಟ್ಟಮೊದಲಿಗೆ ತಿಳಿದುಕೊಳ್ಳಬೇಕು. ಯಾವುದೂ ಶಾಶ್ವತವಲ್ಲ , ಯಾರೂ ಶಾಶ್ವತರಲ್ಲ. ಎಲ್ಲವನ್ನೂ ಎಲ್ಲರನ್ನೂ ಒಂದು ದಿನ ಬಿಟ್ಟು ಹೋಗಲೇಬೇಕು. ಅದೇ ಈ ಭೂಮಿಯ ನಿಯಮ. ಬಂದವರೆಲ್ಲಾ ಇಲ್ಲೇ ತಂಗಿಬಿಟ್ಟರೆ ಮುಂದಿನ ಪೀಳಿಗೆಗೆ ಜಾಗವೆಲ್ಲಿ?

ಜನಿಸಿ ಬಂದವರಿಗೆಲ್ಲಾ ಮರಣ ನಿಶ್ಚಯ ಎಂದಮೇಲೆ ನಾವಿರುವಷ್ಟು ದಿನ ಸಂತಸದಿಂದಿದ್ದು ನಮ್ಮ ಸಹಜೀವಿಗಳಿಗೂ ಸಂತಸವನ್ನು ಹಂಚಿ ಹೋಗೋಣ. ಆ ಸರ್ವನಿಯಾಮಕನನ್ನು ಸೇರುವ ಹಾದಿಯಲ್ಲಿ ಸಾಗೋಣ. ನಮ್ಮಲ್ಲಿ ಶ್ರದ್ಧೆಯಿದ್ದರೆ, **ಅವನು** ಬೇಕೇಬೇಕೆಂಬ ಹಂಬಲವಿದ್ದರೆ ಅವನು ದೊರೆಯುವನಂತೆ. ಈ ಮಾರ್ಗ 'ಒಳಗಿನ ಮಾರ್ಗ'ವಂತೆ. ಹೊರಗಡೆ ಅರಸಿದರೆ ಸಿಗುವುದಿಲ್ಲವಂತೆ. ನಮ್ಮ ಅಂತರಂಗದಲ್ಲಿ ಅವನ ಮುಖ 'ಚಿರಮಧುರ ಕಾಂತಿಯಲಿ' ಶೋಭಿಸುತ್ತಿರುವುದಂತೆ. ಇದನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ನಮ್ಮ ಗುರಿಯಾಗಲಿ. ❁

## ಸ್ವಾಮಿ ಬ್ರಹ್ಮಾನಂದರ ದಿವ್ಯವ್ಯಕ್ತಿತ್ವ

ಒಂದು ಸಲ ಕಾಶಿಯ ಸೇವಾಶ್ರಮ ಮತ್ತು ಅದ್ವೈತಾಶ್ರಮದ ಸಾಧುಗಳಲ್ಲಿ ಯಾವುದೋ ವಿಷಯಕ್ಕೆ ಮನಸ್ತಾಪ ಉಂಟಾಗಿತ್ತು. ಇವರೆಲ್ಲರೂ ಮನುಷ್ಯರೇ ತಾನೇ, ಮಧ್ಯೆ ಮಧ್ಯೆ ಒಂದೊಂದು ಸಲ ಹೀಗೆ ಮನಸ್ತಾಪಗಳು, ತಪ್ಪುಗಳು ಸಂಭವಿಸುವುದು ಸಹಜ. ಈ ಸಾಧುಗಳಲ್ಲಿ ಪ್ರೀತಿ ಸೌಹಾರ್ದತೆಗಳ ಅಭಾವದಿಂದಾಗಿ ಅಲ್ಲಿ ಗದ್ದಲದ ಅವ್ಯವಸ್ಥೆ ಸೃಷ್ಟಿಯಾಗಿತ್ತು. ಎಲ್ಲರೂ ರಾಜಾ ಮಹಾರಾಜರನ್ನು (ಸ್ವಾಮಿ ಬ್ರಹ್ಮಾನಂದರನ್ನು) ಒತ್ತಾಯಿಸತೊಡಗಿದರು, ನೀವು ಹೋಗದಿದ್ದರೆ ಈ ಸಮಸ್ಯೆ ಪರಿಹಾರವಾಗುವುದು ಸಾಧ್ಯವಿಲ್ಲ. ನೀವು ಹೋಗಲೇಬೇಕು. ರಾಜಾಮಹಾರಾಜರಿಗೆ ಇಚ್ಛೆ ಇಲ್ಲದಿದ್ದರೂ ಹೊರಟರು. ಹೋದವರು ಅಲ್ಲಿ ಯಾವ ವಿಚಾರ ವಿಮರ್ಶೆಗಳ ಗೊಡವೆಗೂ ಹೋಗಲಿಲ್ಲ. ಕೇವಲ ಜಪ-ಧ್ಯಾನ ಮಾಡಲು ಪ್ರಾರಂಭಿಸಿದರು. ತಪ್ಪು ಯಾರದು, ಅನ್ಯಾಯ ಯಾರದು ಈ ಮಾತು ಅಲ್ಲಿ ಉದ್ಭವಿಸಲೇ ಇಲ್ಲ! ಅವರ ಪವಿತ್ರ ಸಾನ್ನಿಧ್ಯದ ಮಹಿಮೆಯಿಂದಾಗಿಯೇ, ಅಲ್ಲಿನ ಪರಿಸ್ಥಿತಿ ಸಂಪೂರ್ಣವಾಗಿ ಪರಿವರ್ತನೆಗೊಂಡು ಪ್ರಶಾಂತತೆ ಪಸರಿಸಿದ್ದು ಪ್ರತಿಯೊಬ್ಬರ ಅನುಭವಕ್ಕೂ ಬಂದಿತ್ತು. ರಾಜಾಮಹಾರಾಜರ ನೇತೃತ್ವವೆಂದರೆ ವಿಶಿಷ್ಟ ರೀತಿಯದು! ಉಪದೇಶಗಳನ್ನು ನೀಡಿ ತಾವು ಹೇಳಿದಂತೆಯೇ ಕೇಳಬೇಕೆಂದು ಅವರು ಯಾರನ್ನೂ ಒತ್ತಾಯಪಡಿಸುತ್ತಿರಲಿಲ್ಲ. ತಮ್ಮ ಪ್ರಭಾವಶಾಲಿ ವ್ಯಕ್ತಿತ್ವದ ಶಕ್ತಿಯಿಂದ ಪರರನ್ನು ತಮ್ಮ ಅನುವರ್ತಿಗಳನ್ನಾಗಿ ಮಾಡಿಕೊಳ್ಳುತ್ತಿದ್ದರು. ಆಧ್ಯಾತ್ಮಿಕ ಜೀವನದಲ್ಲಿ ಯಾವಾಗ ಆಧ್ಯಾತ್ಮಿಕತೆಯ ಕೊರತೆ ಉಂಟಾಗುವುದೋ ಆಗ ತಪ್ಪು ಅಭಿಪ್ರಾಯಗಳೂ, ಮನಸ್ತಾಪಗಳೂ ಸೃಷ್ಟಿಯಾಗಿಬಿಡುತ್ತವೆ. ಇಂತಹ ಸಂದರ್ಭಗಳಲ್ಲಿ ಯಾವುದರಿಂದ ಆಧ್ಯಾತ್ಮಿಕತೆಯ ವೃದ್ಧಿಯಾಗುತ್ತದೆಯೋ ಅದನ್ನು ನೆರವೇರಿಸಿದರೆ ಎಲ್ಲವೂ ಶಾಂತಿಮಯವಾಗುತ್ತದೆ ಎಂದು ಅವರು ಹೇಳುತ್ತಿದ್ದರು. ರಾಮಕೃಷ್ಣ ಮಹಾಸಂಘದಲ್ಲಿ ಯಾರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆ, ಯಾರಲ್ಲಿ ಯಾವ ಸಾಮರ್ಥ್ಯವಿದೆ, ಯಾವ ಕೆಲಸವನ್ನು ಯಾರಿಂದ ಹೇಗೆ ಮಾಡಿಸಬೇಕು ಇದೆಲ್ಲವನ್ನು ಅವರು ಸಮರ್ಥ ರೀತಿಯಲ್ಲಿ ಬಲ್ಲವರಾಗಿದ್ದರು. ಯಾವ ಉಪನ್ಯಾಸಗಳನ್ನೂ ಕೊಡದೆ ಅವರು ಸಂಘದಲ್ಲಿ ಸರ್ವವಿಜಯಿಯಾಗಿದ್ದರು. ಇದು ಅವರ ದಿವ್ಯವ್ಯಕ್ತಿತ್ವದ ವೈಶಿಷ್ಟ್ಯ.

— ಸ್ವಾಮಿ ಭೂತೇಶಾನಂದ *(ಅಂತರ್ಮುಖಿ, ೨೦೧೪, ಪು.೪೦೭, ಮೈಸೂರು ಆಶ್ರಮದ ಪ್ರಕಟಣೆ)*